## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:/ವಿವಾದ:90/2014-15 ದಿ: 16-09-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1. ವಿ.ಎಸ್.ವೀರೇಶ ತಂದೆ: ಹೊನ್ನಮ್ಮನವರ ಸಿದ್ದಪ್ಪ
   ಕೆ. ಸೂಗೂರು ಗ್ರಾಮ, ಸಿರುಗುಪ್ಪ ತಾಲೂಕ
2. ಸಿದ್ದಪ್ಪ ತಂದೆ: ಲೇಟ್ ಮುದುಕಪ್ಪ
   ಕೆ. ಸೂಗೂರು ಗ್ರಾಮ, ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

1. ಲಿಂಗಪ್ಪ ತಂದೆ: ಯಂಕಪ್ಪ
2. ನಾಗಮ್ಮ ಗಂಡ: ಕಾಡಸಿದ್ದಪ್ಪ
3. ಬಸಪ್ಪ ತಂದೆ: ಲಿಂಗಪ್ಪ
   ಹಿರೇಹಾಳು ಗ್ರಾಮ, ಸಿರುಗುಪ್ಪ ತಾಲೂಕ

**ವಿವಾದಿತ ಜಮೀನಿನ ವಿವರ**

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ: | ದಖಿವಾದು ಸಂಖ್ಯೆ: |
|---|---|---|---|---|
| ಹಿರೇಹಾಳು ಗ್ರಾಮ | 89 | 8-70 | H-30/2013-14 | 65/13-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಹಿರೇಹಾಳುಗ್ರಾಮದ ಸ.ನಂ.89 ವಿಸ್ತೀರ್ಣ 8-70ಎಕರೆ** ಜಮೀನಿಗೆ ಸಂಭಂದಿಸಿದಂತೆ **ಪಾಲುವಿಭಾಗ ಪ್ರಕಾರ ವಿ.ಎಸ್. ವೀರೇಶ ತಂದೆ: ಹೊನ್ನಮ್ಮನವರ ಸಿದ್ದಪ್ಪ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **1) ಲಿಂಗಪ್ಪ ತಂದೆ: ಯಂಕಪ್ಪ 2) ನಾಗಮ್ಮ ಗಂಡ: ಕಾಡಸಿದ್ದಪ್ಪ 3) ಬಸಪ್ಪ ತಂದೆ: ಲಿಂಗಪ್ಪ ಹಿರೇಹಾಳು ಗ್ರಾಮ ಇವರು ದಿ:31-12-2012 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **24-07-2015, 15-10-2015, 18-12-2015, 22-1-2016, 29-02-2016,17-06-2016, 01-07-2016,08-07-2016,29-07-2016** ಮತ್ತು **05-08-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ 1) ಹೊನ್ನಮ್ಮನವರ ಸಿದ್ದಪ್ಪ ತಂದೆ: ಮುದುಕಪ್ಪ, 2)ವಿ.ಎಸ್. ವೀರೇಶ ತಂದೆ: ಹೊನ್ನಮ್ಮನವರ ಸಿದ್ದಪ್ಪ 3) ಪಾರ್ವತಮ್ಮ ಗಂಡ: ಹೊನ್ನಮ್ಮನವರ ಸಿದ್ದಪ್ಪ, ಕೆಸೂಗೂರು ಗ್ರಾಮ ಇವರು ಹಿರೇಹಾಳು ಗ್ರಾಮದ ಸ.ನಂ. 89 ವಿಸ್ತೀರ್ಣ 8-70 ಎಕರೆ ಜಮೀನು ಹೊನ್ನಮ್ಮನವರ ಸಿದ್ದಪ್ಪ ನವರ ಹೆಸರಿನಲ್ಲಿದ್ದು ನನ್ನ ಮಗನಾದ ವಿ.ಎಸ್. ವೀರೇಶ ಇವರ ಭಾಗಕ್ಕೆ 4-70 ಎಕರೆ ಮತ್ತು ಹೆಂಡತಿಯಾದ ಪಾರ್ವತಮ್ಮ ನವರ ಭಾಗಕ್ಕೆ 4-00 ಎಕರೆ ಹಂಚಿಕೆ ಮಾಡಿಕೊಂಡಿರುತ್ತಾರೆ. ಸದರಿ ಜಮೀನು ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಲಿಂಗಪ್ಪ ತಂದೆ: ಯಂಕಪ್ಪ 2) ನಾಗಮ್ಮ ಗಂಡ: ಕಾಡಸಿದ್ದಪ್ಪ 3) ಬಸಪ್ಪ ತಂದೆ: ಲಿಂಗಪ್ಪ ಹಿರೇಹಾಳು ಗ್ರಾಮ ಇವರು ದಿ: 31-12-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಸದರಿ ನಮ್ಮ ಕುಟುಂಬದ ಜಮೀನಿಗೂ ಇವರಿಗೂ ಮೂಲ ದಾಖಲೆ ಪ್ರಕಾರ ಯಾವುದೇ ಸಂಭಂದಿರುವುದಿಲ್ಲ. ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಮೂಲದಾಖಲೆ, ವಂಶವೃಕ್ಷ, ವಿಭಾಗ ಪತ್ರ ಪ್ರಕಾರ ವಿ.ಎಸ್. ವೀರೇಶ ತಂದೆ: ಹೊನ್ನಮ್ಮನವರ ಸಿದ್ದಪ್ಪ ಇವರ ಹೆಸರಿಗೆ ವಿಸ್ತೀರ್ಣ 4-70 ಎಕರೆ ಜಮೀನು ಮತ್ತು ಪಾರ್ವತಮ್ಮ ಗಂಡ: ಹೊನ್ನಮ್ಮನವರ ಸಿದ್ದಪ್ಪ ಇವರ ಹೆಸರಿಗೆ 4-00 ಎಕರೆ ಜಮೀನು ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ 1) ಲಿಂಗಪ್ಪ ತಂದೆ: ಯಂಕಪ್ಪ 2) ನಾಗಮ್ಮ ಗಂಡ: ಕಾಡಸಿದ್ದಪ್ಪ 3) ಬಸಪ್ಪ ತಂದೆ: ಲಿಂಗಪ್ಪ ಹಿರೇಹಾಳು ಗ್ರಾಮ ಇವರು ಹಿರೇಹಾಳು ಗ್ರಾಮದ ಸ.ನಂ. 89 ವಿಸ್ತೀರ್ಣ 8-70 ಸೆಂಟ್ಸ್ ಜಮೀನು ವಿ.ಎಸ್. ವೀರೇಶ ಇವರ ಭಾಗಕ್ಕೆ 4-70 ಎಕರೆ ಮತ್ತು ಪಾರ್ವತಮ್ಮ ಇವರ ಭಾಗಕ್ಕೆ 4-00 ಎಕರೆ ಜಮೀನು ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ದಿ: 31-12-2013 ರಂದು ತಕರಾರು ಅರ್ಜಿ ಸಲ್ಲಿಸಲಾಗಿದೆ. ವಿಚಾರಣೆ ಸಮಯದಲ್ಲಿ ಯಾವುದೇ ರೀತಿಯ ಲಿಖಿತದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಮೌಖಿಕವಾಗಿ ಯವುದೇ ಹೇಳಿಕೆಗಳನ್ನಾಗಲೀ ನೀಡಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ವಂಶವೃಕ್ಷ ಹಾಗೂ ಪಾಲು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಹಿರೇಹಾಳುಗ್ರಾಮದ ಸ.ನಂ.89 ವಿಸ್ತೀರ್ಣ 8-70ಎಕರೆ ಜಮೀನು ವಂಶವೃಕ್ಷ ಹಾಗೂ ಪಾಲುವಿಭಾಗ ಪತ್ರ ಪ್ರಕಾರ ವಿ.ಎಸ್. ವೀರೇಶ ಇವರ ಭಾಗಕ್ಕೆ 4-70 ಎಕರೆ ಮತ್ತು ಹೆಂಡತಿಯಾದ ಪಾರ್ವತಮ್ಮ ನವರ ಭಾಗಕ್ಕೆ 4-00 ಎಕರೆ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 16-09-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

16/9/16
ತಹಶೀಲ್ದಾರರು,
ಸಿರುಗುಪ್ಪ ತಾಲ್ಲೂಕು

ಇದರ ಪ್ರತಿಯನ್ನು:
1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.